ಕುಲುಮೆಯಂಥ ಪರಿವಾರವನ್ನು ಹೊತ್ತು ಎಲ್ಲೆಲ್ಲಿ ಅಲೆಯಲು ಸಾಧ್ಯ?

ಶ್ರೀಕಂಠ ಎಲ್ಲವನ್ನೂ ಅರ್ಥ ಮಾಡಿಕೊಳ್ಳುತ್ತಿದ್ದ. ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಕೆಲಸ ಮಾಡಿದ್ದ ಅವನು ಜೀವಮಾನವಿಡೀ ಹುಲ್ಲು ಕಿತ್ತಿರಲಿಲ್ಲ.

"ನನಗೆ ನಿನ್ನ ಅಸಹಾಯಕತೆ ಗೊತ್ತಿದೆ." ಶ್ರೀಕಂಠ ಮುಂದಾಲೋಚನೆಯನ್ನು ವ್ಯಕ್ತಪಡಿಸುತ್ತಾ ಹೇಳಿದ, "ಆದ್ರೆ ಸ್ವಲ್ಪ ಯೋಚಿಸು. ಒಂದು ವೇಳೆ ನಾವು ಇಡೀ ಮನೆಯನ್ನು ಮಾರಿದರೆ, ಒಂದೂವರೆ ಲಕ್ಷ, ಎರಡು ಲಕ್ಷ ಸಿಗುತ್ತದೆ. ಇದಕ್ಕೆ ಬದಲು ನಾವು ನಮ್ಮ ಹಿಸ್ಸೆಯನ್ನು ಬೇರೆಬೇರೆಯಾಗಿ ಮಾರಿದರೆ ಐವತ್ತು ಸಾವಿರಕ್ಕಿಂತ ಒಂದು ನಯಾಪೈಸೆ ಸಹ ಹೆಚ್ಚು ಸಿಗಲ್ಲ. ಇವತ್ತು ಹಿಸ್ಸೆಯ ಮನೆಯಲ್ಲಿರಲು ಯಾರು ಇಷ್ಟಪಡ್ತಾರೆ? ಅದೂ ಕೋಣೆಗಳ ನಡುವಿನ ಓಣಿ, ಮೆಟ್ಟಿಲು, ಹೊಸ್ತಿಲು, ಕೋಣೆಗಳ ನಡುವಿನ ಗೋಡೆಗಳೂ ಹಿಸ್ಸೆಯಾದರೆ ಯಾರು ಕೊಳ್ಳುತ್ತಾರೆ!"

"ಅದೆಲ್ಲಾ ಸರಿಯೇ." ನಾಥಜಿ ವಿನಯ ಮತ್ತು ಗೌರವದಿಂದ ಹೇಳಿದ, "ಇನ್ನೂ ಮೂರ್ನಾಲ್ಕು ವರ್ಷವಾದರೂ ಪರ್ವಾಗಿಲ್ಲ. ನನ್ನ ಮಕ್ಕಳ ಉದ್ಯೋಗ ಯಾವ ದಿಕ್ಕಿನಲ್ಲಿ, ಯಾವ ದೇಶದಲ್ಲಿ ಬರೆದಿದೆಯೋ ಗೊತ್ತಿಲ್ಲ. ಅಷ್ಟರಲ್ಲಿ ನಾನು ಸಹ ರಿಟೈರ್ ಆಗ್ತೀನಿ. ನಾನೂ ಸಹ ಹಾಸಿಗೆ ಗಂಟು ಕಟ್ಟಿ

